ಅಸಲು ದಾವೆ ನಂ.ಃ115/2014
ಡಿಡಬ್ಲ್ಯೂ - 1

ದಿನಾಂಕ 08-01-2021 ರಂದು ಪುನಃ ಸಾಕ್ಷಿಯನ್ನು ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಎನ್.ಟಿ ವಕೀಲರಿಂದ.**

2, 4, 6 ಮತ್ತು 7ನೇ ಪ್ರತಿವಾದಿ ರವರು ನನಗೆ ಸಾಕ್ಷಿ ಹೇಳಲು ಲಿಖಿತವಾಗಿ ಅಧಿಕಾರ ಪತ್ರವನ್ನು ಕೊಟ್ಟಿರುವುದಿಲ್ಲ. ಪ್ರತಿವಾದಿ ಸಂಖ್ಯೆ 2, 4, 6 ಮತ್ತು 7 ರವರು ನನಗೆ ಸಾಕ್ಷಿ ಹೇಳಲು ಅಧಿಕಾರ ನೀಡಿದ್ದಾರೆಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿದ್ದು ಅದನ್ನು ಯಾವ ಆಧಾರದ ಮೇಲೆ ಹೇಳಿದ್ದೇನೆ ಎಂದು ನನಗೆ ಗೊತ್ತಿಲ್ಲ. ನಾನು, ಪ್ರತಿವಾದಿ 2 ಮತ್ತು 4 ರವರು ಒಟ್ಟಿಗೆ ಪ್ರತಿವಾದ ಪತ್ರ ಸಲ್ಲಿಸಿರುತ್ತೇವೆ, ಬೇರೆ ಪ್ರತಿವಾದಿಗಳು ಬೇರೆ ಬೇರೆ ಪ್ರತಿವಾದ ಪತ್ರಗಳನ್ನು ಸಲ್ಲಿಸಿರುತ್ತಾರೆ. ನಾನು, ಪ್ರತಿವಾದಿ 2 ಮತ್ತು 4 ರವರನ್ನು ಹೊರತುಪಡಿಸಿ ಬೇರೆಯವರು ಏನು ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಮೃತ 9ನೇ ಪ್ರತಿವಾದಿ ತನ್ನ ತಂದೆಯ ಪಿಂಚಣಿಯನ್ನು ಪಡೆದುಕೊಳ್ಳುತ್ತಿದ್ದರು. ಸದರಿ ಪಿಂಚಣಿ ಪಡೆದುಕೊಳ್ಳುತ್ತಿದ್ದ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಸಲ್ಲಿಸಿಲ್ಲ. ಸದರಿ ವಿಚಾರವನ್ನು ನಮ್ಮ ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ. ಸದರಿ ವಿಚಾರವನ್ನು ಏಕೆ ನಮ್ಮ ಪ್ರತಿವಾದ ಪತ್ರದಲ್ಲಿ ಬರೆಸಿಲ್ಲ ಎಂದು ನನಗೆ ಹೇಳಲು ಆಗುವುದಿಲ್ಲ. ಮೃತ 9ನೇ ಪ್ರತಿವಾದಿಯು 1991ನೇ ಇಸವಿಯಿಂದ ಪಿಂಚಣಿಯನ್ನು ಪಡೆದುಕೊಳ್ಳುತ್ತಿದ್ದರು. ಮೃತ 9ನೇ ಪ್ರತಿವಾದಿ ತನ್ನ ಜೀವಿತ ಕಾಲದಲ್ಲಿ ನಮ್ಮ ಜೊತೆಯಲ್ಲಿಯೇ ವಾಸವಾಗಿದ್ದು ಪಿಂಚಣಿಯನ್ನು ಪಡೆಯುತ್ತಿದ್ದರು.

ಸರ್ವೆ ನಂಬರ 163 ವಿಸ್ತೀರ್ಣ 9 ಎಕರೆ 20 ಗುಂಟೆ ಜಮೀನನ್ನು ನನ್ನ ತಾಯಿ ಸುಮಾರು 1984-85ನೇ ಇಸವಿಯಲ್ಲಿ ಖರೀದಿ ಮಾಡಿರುತ್ತಾರೆ. ಸದರಿ ಸ್ವತ್ತಿನ ಖರೀದಿ ಪತ್ರವನ್ನು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ದಾಖಲೆಯನ್ನು ಏಕೆ ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ಎಂದು ಹೇಳಲಾಗುವುದಿಲ್ಲ. ಸದರಿ ಸ್ವತ್ತಿನ ಪೈಕಿ 7 ಎಕರೆ ಜಮೀನನ್ನು ನನ್ನ ತಾಯಿಯು 2011ನೇ ಇಸವಿಯಲ್ಲಿ ಮಾರಾಟ ಮಾಡಿರುತ್ತಾರೆ. ಸದರಿ ಮಾರಾಟ ಮಾಡಿದ ಬಗ್ಗೆ ಕ್ರಯ ಪತ್ರವನ್ನು ಸಹ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ದಾಖಲೆಯನ್ನು ನಾನು ಏಕೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದು ಹೇಳಲಾಗುವುದಿಲ್ಲ. ಸದರಿ ಸ್ವತ್ತಿನಲ್ಲಿ ಉಳಿದ 2

ಎಕರೆ 20 ಗುಂಟೆ ಜಮೀನು 2 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ. ನನ್ನ ತಾಯಿಯ ಮರಣದ ನಂತರ ಸದರಿ 2 ಎಕರೆ 20 ಗುಂಟೆ ಜಮೀನಿಗೆ ನಾವೆಲ್ಲರೂ ವಾರಸುದಾರರು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು 2 ನೇ ಪ್ರತಿವಾದಿಯು ಮಾತ್ರ ವಾರಸುದಾರರು ಎಂದು ನುಡಿಯುತ್ತಾರೆ. ನನ್ನ ತಾಯಿಯು ತನ್ನ ಜೀವಿತ ಕಾಲದಲ್ಲಿ 2 ನೇ ಪ್ರತಿವಾದಿ ಮಾತ್ರ ತನ್ನ ವಾರಸುದಾರರು ಎಂದು ಹೇಳಿದ್ದರು ಆದ್ದರಿಂದ 2 ನೇ ಪ್ರತಿವಾದಿ ಮಾತ್ರ ಅವರ ವಾರಸುದಾರರಾಗಿರುತ್ತಾರೆ. ಸದರಿ ವಿಚಾರವನ್ನು ನಮ್ಮ ಪ್ರತಿವಾದ ಪತ್ರದಲ್ಲಿ ತಿಳಿಸಿರುವುದಿಲ್ಲ. ಏಕೆ ಸದರಿ ವಿಚಾರವನ್ನು ನಮ್ಮ ಪ್ರತಿವಾದ ಪತ್ರದಲ್ಲಿ ತಿಳಿಸಿಲ್ಲ ಎಂದು ನನಗೆ ಹೇಳಲಾಗುವುದಿಲ್ಲ. ನನ್ನ ತಾಯಿಯು 2 ನೇ ಪ್ರತಿವಾದಿಯು ಮಾತ್ರ ತನ್ನ ವಾರಸುದಾರರೆಂದು ಅವರು ಮೃತಪಡುವುದಕ್ಕಿಂತ ಸುಮಾರು 10-15 ವರ್ಷ ಮೊದಲಿನಿಂದಲೂ ಹೇಳುತ್ತಿದ್ದರು. (ಸರ್ವೆ ನಂಬರ 163 ರ ಬಗ್ಗೆ ಪ್ರಶ್ನೆಗಳನ್ನು ಕೇಳುವುದಕ್ಕೆ ಪ್ರತಿವಾದಿಗಳ ಪರ ವಕೀಲರು ಸದರಿ ಸ್ವತ್ತು ದಾವಾ ಸ್ವತ್ತಲ್ಲ ಆದ್ದರಿಂದ ಪ್ರಶ್ನೆ ಕೇಳಲು ಬರುವುದಿಲ್ಲ ಎಂದು ತಕರಾರು ವ್ಯಕ್ತಪಡಿಸಿರುತ್ತಾರೆ. ಅದಕ್ಕೆ ವಾದಿ ಪರ ವಕೀಲರು ಸದರಿ ಅಂಶಗಳನ್ನು ಡಿಡಬ್ಲ್ಯೂ-1 ರವರ ಮುಖ್ಯ ವಿಚಾರಣೆಯ 2 ನೇ ಪ್ಯಾರಾದಲ್ಲಿ ನಮೂದಿಸಲಾಗಿರುತ್ತದೆ ಆದ್ದರಿಂದ ಪ್ರಶ್ನೆಗಳು ಅವಶ್ಯಕ ಇರುತ್ತದೆ ಎಂದು ನುಡಿಯುತ್ತಾರೆ.)

ನನ್ನ ತಾಯಿಯು 2014 ನೇ ಇಸವಿಯಲ್ಲಿ ತೀರಿಕೊಂಡಿರುತ್ತಾರೆ. ಸರ್ವೆ ನಂಬರ 163 ರ 2 ಎಕರೆ 20 ಗುಂಟೆ ಜಮೀನನ್ನು 2016 ನೇ ಇಸವಿಯಲ್ಲಿ ನಮ್ಮ ಎಲ್ಲಾ ಅಣ್ಣ-ತಮ್ಮಂದಿರು ಸೇರಿ 2 ನೇ ಪ್ರತಿವಾದಿಯ ಹೆಸರಿನಲ್ಲಿ ಮಾಡಿಸಿರುತ್ತೇವೆ. ಸದರಿ ದಾಖಲೆಗಳನ್ನು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಾಯಿ ಶಹಾಬಾದನ ಸರ್ವೆ ನಂಬರ 163 ರಲ್ಲಿ 7 ಎಕರೆ ಜಮೀನನ್ನು ಮಾರಾಟ ಮಾಡಿ ಬಂದಂತಹ ಹಣದಿಂದ ರ್‍ಯಾವನೂರು ಗ್ರಾಮದ ಸರ್ವೆ ನಂಬರ 80/4 ರ ಸ್ವತ್ತನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ ಅಲ್ಲ. ನನ್ನ ತಾಯಿ ಮೃತಪಟ್ಟ ನಂತರ ಶಹಾಬಾದನ ಸರ್ವೆ ನಂಬರ 163 ರಲ್ಲಿ ಉಳಿದ 2 ಎಕರೆ 20 ಗುಂಟೆ ಜಮೀನಿಗೆ ನಾವು ಎಲ್ಲರೂ ವಾರಸುದಾರರು ಎಂದರೆ ಸರಿ ಅಲ್ಲ. ಸದರಿ ಸ್ವತ್ತಿನಲ್ಲಿ ನಮ್ಮ ಬೇರೆ ಅಣ್ಣ-ತಮ್ಮಂದಿರಿಗೆ ಪಾಲು ಬರಬಾರದೆಂಬ ದುರುದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಸಾಕ್ಷಿದಾರರು ಹೇಳಿದಂತೆ ನನ್ನ ಉಕ್ತ ಲೇಖನಕ್ಕೆ ಕಂಪ್ಯೂಟರ್ ನಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ. ಸರಿ ಇರುತ್ತದೆ**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ